## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಾರ್ಕಳ, ಇವರ ನ್ಯಾಯಾಲಯದಲ್ಲಿ

ದಿನಾಂಕ 25 ನೇ ಜುಲೈ ಮಾಹೆ 2025 ನೇ ಇಸವಿ

**ಸಿ.ಸಿ.ನಂ. 571/2024**

ಮೆಸರ್ಸ್ ಕೋಮಲ ಫೀಡ್ಸ್, ಕನ್ಯಾನ, ಹೆಬ್ರಿ,
ಪ್ರತಿನಿಧಿಸುವವರುಃ ವ್ಯವಸ್ಥಾಪಕ ಪಾಲುದಾರ,
ಶ್ರೀ ಸಿದ್ಧಿ ಪ್ರಸಾದ್ ಶೆಣೈ,
ಪ್ರಾಯಃ 45 ವರ್ಷಗಳು,
ತಂದೆಃ ದಿ. ಬಿ. ಮಂಜುನಾಥ ಶೆಣೈ,
ವಾಸಃ ಮನೆ ನಂಬ್ರ 243/1,
ಜಿ.ಹೆಚ್.ಪಿ. ಶಾಲೆಯ ಹತ್ತಿರ, ಕನ್ಯಾನ,
ಹೆಬ್ರಿ ತಾಲೂಕು. ... ಪಿರ್ಯಾಧಿದಾರರು

- ವಿರುದ್ಧ -

ಮಹಾಲಕ್ಷ್ಮೀ ಏಜೆನ್ಸೀ,
ಮಂಡಾರ್ತಿ, ಸುರ್ಗಿಕಟ್ಟೆ ಮಂಡಾರ್ತಿ,
ಪ್ರತಿನಿಧಿಸುವವರುಃ ಮಾಲೀಕ, ಮಂಜುನಾಥ,
ತಂದೆಃ ಕೃಷ್ಣ ಮೇಸ್ತ್ರೀ,
ವಾಸಃ ಮಂಜುನಾಥ,
ತಂದೆಃ ಕೃಷ್ಣ ಮೇಸ್ತ್ರೀ,
ವಾಸಃ ಜನತಾ ಕಾಲೋನಿ, ಕಾಜರಹಳ್ಳಿ,
ಬ್ರಹ್ಮಾವರ ತಾಲೂಕು,
ಉಡುಪಿ ಜಿಲ್ಲೆ. .... ಆರೋಪಿ

## ಆಪಾದನೆಯ ಸಾರಾಂಶ

ಆರೋಪಿಯಾದ ನೀವು ಪಿರ್ಯಾದಿ ಸಂಸ್ಥೆಯಿಂದ ಜಾನುವಾರು ಮೇವು ಗಳನ್ನು ಖರೀದಿಸಿದ್ದು, ಸದ್ರಿ ಜಾನುವಾರು ಮೇವಿನ ಹಣವನ್ನು ಪಾವತಿಸುವ ಸಲುವಾಗಿ ದಿನಾಂಕ 22.04.2024 ರಂದು ರೂ.1,68,025/- ಗಳಿಗೆ ಹೆಚ್.ಡಿ.ಎಫ್.ಸಿ. ಬ್ಯಾಂಕ್, ಬ್ರಹ್ಮಾವರ ಶಾಖೆ ಚೆಕ್ಕು ಸಂಖ್ಯೆ 000020 ನ್ನು ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದಿದಾರರು

ನಗದೀಕರಿಸಲು ಕೆನರಾ ಬ್ಯಾಂಕ್, ಹೆಬ್ರಿ ಶಾಖೆಗೆ ಹಾಜರುಪಡಿಸಿದ್ದು, ದಿನಾಂಕ 23.04.2024 ರಂದು ಸದರಿ ಚೆಕ್ಕು ಮಾನ್ಯಗೊಳ್ಳದೆ 'Funds Insufficient' (ಸಾಕಷ್ಟು ಹಣ ಇಲ್ಲ) ಎಂಬ ಹಿಂಬರಹದೊಂದಿಗೆ ಹಿಂತಿರುಗಿ ಬಂದಿದ್ದು, ಅದರಂತೆ ಪಿರ್ಯಾದಿದಾರರು ದಿಃ 10.05.2024 ರಂದು ವಕೀಲರ ಮೂಲಕ ನೋಟಿಸು ಜಾರಿ ಮಾಡಿ ಸದರಿ ಚೆಕ್ಕಿನ ಹಣವನ್ನು 15 ದಿನಗಳ ಒಳಗೆ ಮರುಪಾವತಿ ಮಾಡುವಂತೆ ಕೇಳಿಕೊಂಡಿದ್ದು, ಸದರಿ ನೋಟಿಸು ನಿಮಗೆ ದಿನಾಂಕ 13.05.2024 ರಂದು ಜಾರಿಯಾಗಿದ್ದು, ಆದರೆ ಇದುವರೆಗೆ ನೀವು ಚೆಕ್ಕಿನ ಬಾಬ್ತು ಹಣವನ್ನು ಪಿರ್ಯಾದಿದಾರರಿಗೆ ನೀಡಿರುವುದಿಲ್ಲ. ಆದುದರಿಂದ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಲಂ 138 ಕೆಳಗೆ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಪ್ರಶ್ನೆ 1ಃ ಮೇಲೆ ಹೇಳಿದ ಆರೋಪವನ್ನು ಕೇಳಿರುವಿರಾ?
ಉತ್ತರಃ

ಪ್ರಶ್ನೆ 2ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಬಯಸುತ್ತೀರೋ?
ಉತ್ತರಃ

(ಆರೋಪಿಗೆ ಮೇಲಿನ ಆಪಾದನೆಯನ್ನು ಓದಿ ಹೇಳಿ ವಿವರಿಸಿದ್ದು, ಅವರು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾರೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ.)

ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.,
ಕಾರ್ಕಳ.